ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಜನವರಿ 2026 ಮಾಸ ಪತ್ರಿಕೆ

ಸಂಪುಟ/Volume : 48
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | January 2026 | Monthly**




## ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ
# ಬೃಹತ್ ಪ್ರತಿಭಟನೆ



## ಗಣರಾಜ್ಯೋತ್ಸವದ ಶುಭಾಶಯಗಳು

## ಸಂಪಾದಕೀಯ

ಆತ್ಮೀಯರೇ,

ಇಂಗ್ಲೀಷ್ ಕ್ಯಾಲೆಂಡರ್ ಪ್ರಕಾರವಾಗಿ 2025ನೇ ವರ್ಷ ಮುಗಿದು 2026 ಆಗಮಿಸಿದೆ. ಇಡೀ ಜಗತ್ತಿನಲ್ಲೆಲ್ಲಾ ಹೊಸ ವರ್ಷವೆಂದು ಸಂಭ್ರಮಿಸುವರು, ಹಾಗೆಯೇ ನಮ್ಮಲ್ಲೂ ಸಹ. ನೈಜವಾಗಿ ನಮ್ಮ ಭಾರತದ ಹೊಸ ವರ್ಷ ಯುಗಾದಿಯಲ್ಲವೇ?

ಹಲವಾರು ಶತಮಾನಗಳಿಂದ ನಮ್ಮ ಪೂರ್ವಜರಾದಿಯಾಗಿ ನಾವೆಲ್ಲರೂ ಯುಗಾದಿಯೇ ನಮ್ಮ ನವ ವರ್ಷವೆಂದು ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಇದನ್ನು ನಮ್ಮ ಮುಂದಿನ ಪೀಳಿಗೆಗೂ ತಿಳಿಸುವುದು ನಮ್ಮ ಜವಾಬ್ದಾರಿ.

ಸ್ವಾಮಿ ವಿವೇಕಾನಂದರ ಜನ್ಮದಿನ ಜನವರಿ 12ರಿಂದ ನೇತಾಜಿ ಸುಭಾಷರ ಜನ್ಮದಿನ ಜನವರಿ 23ರ ವರೆಗೆ ಒಂದು ದಿನ ಸಂಕಲ್ಪ ದಿನಾಚರಣೆ (ಕರ್ತವ್ಯ ಬೋಧ್ ದಿವಸ್) ಕಾರ್ಯಕ್ರಮವನ್ನು ನಮ್ಮ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರತಿವರ್ಷ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸುತ್ತಿದೆ. ಈ ವರ್ಷವೂ ಯಶಸ್ವಿಯಾಗಿ ಕಾರ್ಯಕ್ರಮ ಮಾಡುವ ಸಂಕಲ್ಪ ಮಾಡೋಣ.

ಸೂರ್ಯದೇವನು ಧನುರ್ ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಕಾಲವೇ ಉತ್ತರಾಯಣ ಪುಣ್ಯಕಾಲವಾಗಿದೆ. ಇದನ್ನು ಮಕರ ಸಂಕ್ರಾಂತಿ ಎಂದು ದೇಶದ ವಿವಿದೆಡೆ ಬೇರೆ ಬೇರೆ ಹೆಸರುಗಳಿಂದ ಆಚರಣೆ ಮಾಡುವ ವಾಡಿಕೆ ಇದೆ. ನಮ್ಮ ಕರ್ನಾಟಕದಲ್ಲಿ ಇದನ್ನು ಸುಗ್ಗಿ ಹಬ್ಬ ಎಂದೂ ಸಹ ಕರೆಯುತ್ತಾರೆ. ವಿಶೇಷವಾಗಿ ರೈತರಿಗೆಲ್ಲ ಸಮೃದ್ಧಿಯ ಸಂಕೇತ. ಮನೆ ಮನೆಗೆಲ್ಲ ಎಳ್ಳು ಬೆಲ್ಲ ಹಂಚುವುದರ ಜೊತೆಗೆ ಎಳ್ಳು ಬೆಲ್ಲ ಸವಿದು ಒಳ್ಳೆಯ ಮಾತನಾಡಿ ಎಂದು ಸಂದೇಶ ನೀಡುವ ಹಬ್ಬವಾಗಿದೆ. ಇದಕ್ಕೆ ವೈಜ್ಞಾನಿಕ ಹಿನ್ನೆಲೆಯೂ ಕೂಡ ಇದೆ.

ಜನವರಿ 26 ಭಾರತೀಯರಿಗೆ ಅತ್ಯಂತ ಮಹತ್ವದ ದಿನವಾಗಿದೆ. ಭಾರತದಲ್ಲಿ ಸಂವಿಧಾನವನ್ನು 1950 ಜನವರಿ 26ರಂದು ಜಾರಿಗೊಳಿಸಿದ ದಿನವಾಗಿದ್ದು ಹಾಗೂ ರಾಜಪ್ರಭುತ್ವವನ್ನು ತ್ಯಜಿಸಿ, ಪ್ರಜಾಪ್ರಭುತ್ವದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದ ದಿನವೂ ಕೂಡ ಆಗಿದೆ. ಡಾ॥ ಬಿ ಆರ್ ಅಂಬೇಡ್ಕರ ನೇತೃತ್ವದ ಸಂವಿಧಾನ ರಚನಾ ಸಮಿತಿ ರಚಿಸಿದ ಸಂವಿಧಾನವನ್ನು ಅಂಗೀಕರಿಸಿ ಜಾರಿಗೆ ತರಲಾಯಿತು. ಭಾರತವು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಲಿಖಿತ ಸಂವಿಧಾನವನ್ನು ಹೊಂದಿದ್ದು, ಪ್ರಜೆಗಳಿಂದ, ಪ್ರಜೆಗಳಿಗಾಗಿಯೇ, ಪ್ರಜೆಗಳಿಗೋಸ್ಕರವೇ ನಡೆಸುವ ಆಡಳಿತ ಪ್ರಜಾಪ್ರಭುತ್ವವಾಗಿದೆ. ಇದರ ಸಂಸ್ಮರಣೆಗಾಗಿ ಗಣರಾಜ್ಯೋತ್ಸವವನ್ನು ಪ್ರತಿ ವರ್ಷವೂ ದೇಶದಾದ್ಯಂತ ಶಾಲಾ ಕಾಲೇಜು ಮತ್ತು ಸರ್ಕಾರಿ ಕಛೇರಿಗಳು ಸೇರಿದಂತೆ ಎಲ್ಲೆಡೆ ಗೌರವಪೂರ್ವಕವಾಗಿ ಆಚರಿಸಲಾಗುತ್ತಿದೆ.

ಸಂಕಲ್ಪ ದಿನಾಚರಣೆಯನ್ನು ವಿವಿಧ ಜಿಲ್ಲೆಗಳಲ್ಲಿ ಆಚರಿಸಿ ಕಾರ್ಯಕ್ರಮದ ಭಾವಚಿತ್ರ ಮತ್ತು ವರದಿಯನ್ನು kssta55@gmail.com ಗೆ ಮೇಲ್ ಮೂಲಕ ಕಳುಹಿಸುವುದು.

ನಮ್ಮ ಸಹೃದಯ ಓದುಗೆಲ್ಲರಿಗೂ ಮಕರ ಸಂಕ್ರಾಂತಿ ಹಾಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು..

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎಸ್.


## ಪರಿವಿಡಿ


- ಸಂಕಲ್ಪ ದಿನ ಏನು? ಏಕೆ?
  – ಹೆಚ್. ನಾಗಭೂಷಣ ರಾವ್ 3
- ಪ್ರಜಾರಾಜ್ಯೋತ್ಸವ
  – ಡಾ॥ ಲೋಕೇಶ್ 4
- ವಿದ್ಯಾರ್ಥಿಗಳ ಭವಿಷ್ಯವನ್ನು ಬೆಳಗಿಸಲು, ತ್ರಿಭಾಷಾ ಸೂತ್ರವನ್ನು ಉಳಿಸೋಣ
  – ಚಿದಾನಂದ ಆ. ಪಾಟೀಲ 5
- ಧೀರ ಸೇನಾನಿ–ನೇತಾಜಿ ಸುಭಾಷ್ ಚಂದ್ರ ಬೋಸ್
  – ನಂ. ನಾಗಲಕ್ಷ್ಮಿ 7
- ಮಕರ ಸಂಕ್ರಾಂತಿ
  – ಶ್ರೀಮತಿ ಲಕ್ಷ್ಮೀಸಿಂಗ್ ಬಿ. 8
- **Prof. K Narahari -** V. Nagaraj 9
- ವಿವಿಧ ಬೇಡಿಕೆಗಳ ಜಾರಿಗೆ ಆಗ್ರಹಿಸಿ ದಿಟ್ಟ ಹೋರಾಟ 11
- ಸಂಕಲ್ಪ 12

# ವಿವಿಧ ಬೇಡಿಕೆಗಳ ಜಾರಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನೇತೃತ್ವದಲ್ಲಿ ದಿಟ್ಟ ಹೋರಾಟ




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘ, ಕರ್ನಾಟಕ ರಾಜ್ಯ ಪ್ರೌಢಶಾಲಾ ಹಿಂದಿ ಶಿಕ್ಷಕರ ಸಂಘ, ಸಂಸ್ಕೃತ ಭಾರತಿ, ದೇಶೀಯ ಭಾಷೆಗಳ ಹಿತರಕ್ಷಣಾ ಒಕ್ಕೂಟ, ಈ ಎಲ್ಲಾ ಸಂಘಟನೆಗಳ ನೇತೃತ್ವದಲ್ಲಿ ಶೈಕ್ಷಣಿಕ ಮತ್ತು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ದಿನಾಂಕ 09–12–2025 ರಂದು ಸುವರ್ಣಸೌಧ ಬೆಳಗಾವಿಯಲ್ಲಿ ಒಂದು ದಿವಸದ ಪ್ರತಿಭಟನೆ ನಡೆಯಿತು. ಪ್ರತಿಭಟನೆಯ ಪ್ರಮುಖ ಬೇಡಿಕೆಗಳಾದ 1. ಸರಕಾರ ದ್ವಿಭಾಷಾ ನೀತಿಯನ್ನು ಜಾರಿಮಾಡುವುದನ್ನು ಬಿಟ್ಟು– ತ್ರಿಭಾಷಾ ಸೂತ್ರ ಮುಂದುವರೆಸುವುದು. 2. ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ಹಳೆ ಪಿಂಚಣಿ (OPS) ಜಾರಿಗೆ ತರುವುದು. 3. ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುದಾನಿತ ನೌಕರರಿಗೂ ವಿಸ್ತರಿಸುವ ಬಗ್ಗೆ. 4. ಪ್ರೌಢಶಾಲಾ ಶಿಕ್ಷಕರಿಗೆ ಪಿ.ಯು ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ. 5. 1995 ರ ನಂತರ ಪ್ರಾರಂಭವಾಗಿರುವ ಖಾಸಗಿ ಶಾಲಾ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ. 6. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ, ಪಿಯುಸಿ ಶಿಕ್ಷಣ ವ್ಯವಸ್ಥೆ ಉಳಿವಿಗಾಗಿ ಹಾಗೂ ಖಾಸಗಿ ಶಾಲಾ ಕಾಲೇಜುಗಳ ಮಾನ್ಯತೆ ನವೀಕರಣ ಸರಳೀಕರಣಗೊಳಿಸುವಂತೆ ಒತ್ತಾಯಿಸಿ ಬೃಹತ್ ಪ್ರತಿಭಟನೆ ನಡೆಯಿತು. ಈ ಪ್ರತಿಭಟನೆಯನ್ನುದ್ದೇಶಿಸಿ ವಿಧಾನ ಪರಿಷತ್ ಸದಸ್ಯರಾದ ಎಸ್ ವಿ ಸಂಕನೂರ, ಶಶೀಲ್ ನಮೋಶಿ, ವಿದ್ಯಾಭಾರತಿ ಪ್ರಾಂತ ಅಧ್ಯಕ್ಷರಾದ ಪರಮೇಶ್ವರ ಹೆಗಡೆ, ಕನಕದಾಸ ಶಿಕ್ಷಣ ಸಂಸ್ಥೆಯ ಛೇರ್ಮನ್‌ರಾದ ರವೀಂದ್ರನಾಥ್ ಬಿ ದಂಡಿನ, ಹೋರಾಟಗಾರರಾದ ಸುಭಾಷ್‌ಸಿಂಗ್ ಜಮಾದಾರ, ಸುಧೀಂದ್ರ ದೇಶಪಾಂಡೆ, ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳ, ಕರ್ನಾಟಕ ರಾಜ್ಯ ಪ್ರೌಢಶಾಲಾ ಹಿಂದಿ ಶಿಕ್ಷಕರ ಸಂಘದ ಅಧ್ಯಕ್ಷರಾದ ಮಂಜುನಾಥ್, ಖಜಾಂಚಿಗಳಾದ ಮಾಲತೇಶ್, ಉಪಾಧ್ಯಕ್ಷರಾದ ರಾಮಕೃಷ್ಣ, ಪ್ರಮುಖರಾದ ಡಿ.ಎಂ.ರಾಥೋಡ್, ABRSM ರಾಜ್ಯ ಸಂಯೋಜಕರಾದ ಡಾ ಶಿವಪೂಜಿ ಕೋಟಿ, ಸಂಸ್ಕೃತ ಭಾರತಿ ಸಂಘಟನೆಯ ಭಾಗ್ಯಲಕ್ಷ್ಮಿ, ಪ್ರಸಾದ್, ಅನುದಾನರಹಿತ ಆಡಳಿತ ಮಂಡಳಿ ಅಧ್ಯಕ್ಷರಾದ ಎಸ್ ಕೆ ಆದಪ್ಪನವರ, ಶಾಂತಣ್ಣ ಕಡಿವಾಳ, ವಿ.ಜಿ.ಪಾಟೀಲ್, ಮಾಧ್ಯಮಿಕ ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಚಿದಾನಂದ ಪಾಟೀಲ್, ಗಂಗಾಧರಾಚಾರಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ನಾರಾಯಣ ಭಟ್, ಡಿ ಕೆ ಮಮತಾ, ಜೆ ಎಂ ಜೋಶಿ, ಶಿರೀಷ್ ಕುಲಕರ್ಣಿ, ಅವಿನಾಶ ಹಿರೇಮಠ, ಶ್ರೀಧರ ಪಾಟೀಲ ಕುಲಕರ್ಣಿ, ಗುರುರಾಜ ಕುಲಕರ್ಣಿ, ಬಸವರಾಜ ದೇವರಮನಿ, ಆರ್.ಜಿ ಸನ್ನಿ, ರವೀಂದ್ರ ತುಂಗಳ, ಮಲ್ಲಿಕಾರ್ಜುನ ಕೂಡಗಿ ಮತ್ತು ಬಿ.ಆರ್ ಹರಿದಾಸ್ ಇನ್ನಿತರರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಮಂತ್ರಿಗಳಾದ ಶ್ರೀ ಚೆಲುವರಾಯ ಸ್ವಾಮಿಯವರು ವಿವಿಧ ಬೇಡಿಕೆಗಳಿಗೆ ಆಗ್ರಹಿಸಿರುವ ನಮ್ಮ ಮನವಿ ಪತ್ರವನ್ನು ಸ್ವೀಕರಿಸಿ ಶಿಕ್ಷಣ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಶ್ರೀ ಕೃಷ್ಣಾಜಿ ಕರಿಚನ್ನಣ್ಣನವರ್, ನಿರ್ದೇಶಕರು, ಪ್ರೌಢಶಿಕ್ಷಣ, ಆಯುಕ್ತರ ಕಛೇರಿ ಬೆಂಗಳೂರು ಇವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿಯನ್ನು ಸ್ವೀಕರಿಸಿದರು ಹಾಗೂ ಶ್ರೀ ಭೀಮನಗೌಡ (ರಾಜುಗೌಡ) ಪಾಟೀಲ್ ಮಾನ್ಯ ಶಾಸಕರು, ಇವರೂ ಸಹ ಪ್ರತಿಭಟನೆ ನಡೆದ ಸ್ಥಳಕ್ಕೆ ಆಗಮಿಸಿ ಮನವಿಯನ್ನು ಸ್ವೀಕರಿಸಿ ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ವಿವಿಧ ಬೇಡಿಕೆಗಳನ್ನು ಆಗ್ರಹಿಸಿ ನಡೆದ ಪ್ರತಿಭಟನೆಯಲ್ಲಿ ನೂರಾರು ಶಿಕ್ಷಕರು ಭಾಗವಹಿಸಿ ಎಲ್ಲಾ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಒಕ್ಕೊರಲಿನಿಂದ ಸರ್ಕಾರವನ್ನು ಒತ್ತಾಯಿಸಿದರು. ಈ ಹೋರಾಟವು ಅತ್ಯಂತ ಯಶಸ್ವಿಯಾಗಿ ಸಂಪನ್ನವಾಯಿತು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-01-2026 Date of Posting 20th or 21st of every month Posted at Periodical Rate

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ.)

55, ಯಾದವಸ್ಮೃತಿ, 1 ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು -20



## ಸಂಕಲ್ಪ



ಸರ್ವಶಕ್ತಿವಂತನಾದ ಭಗವಂತನನ್ನು ಹಾಗೂ
ನಮ್ಮ ಹಿಂದಿನ ಶೇಷ್ಠ ಗುರುಪರಂಪರೆಯನ್ನು
ಸ್ಮರಿಸುತ್ತಾ ತ್ಯಾಗ, ಸೇವೆ, ಕರ್ಮಠತೆಗಳ ಸಾಕಾರ ಮೂರ್ತಿಯಾಗಿ,
ನಾಡಿನ ಜನತೆಗೆ, ಏಳಿ! ಎದ್ದೇಳಿ !! ಗುರಿಮುಟ್ಟುವವರೆಗೂ ನಿಲ್ಲದಿರಿ !!!
ಎಂಬ ರಾಷ್ಟ್ರೀಯ ಕರ್ತವ್ಯದ ಕರೆ ನೀಡಿದ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ
ಜನ್ಮ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ ನಾನು ಹೀಗೆ ಸಂಕಲ್ಪ ಮಾಡುತ್ತೇನೆ.

ಶಿಕ್ಷಕ ವೃತ್ತಿಯು ಶೇಷ್ಠವಾದ ವೃತ್ತಿಯೆಂದು ಪ್ರಜ್ಞಾ ಪೂರ್ವಕವಾಗಿ ತಿಳಿದೇ ನಾನು
ಈ ವೃತ್ತಿಯನ್ನು ಸ್ವೀಕರಿಸಿದ್ದೇನೆ. ನನ್ನ ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಿಕೊಳ್ಳಲು ಸದಾ
ಕಾರ್ಯತತ್ಪರನಾಗಿ, ನನ್ನ ಸ್ವಂತ ಜೀವನದ ಆದರ್ಶದ ಮೂಲಕ, ನನ್ನ ವಿದ್ಯಾರ್ಥಿಗಳಲ್ಲಿ
ಸದ್ಗುಣಗಳನ್ನು ಮೂಡಿಸಿ ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ನನ್ನ
ಹೊಣೆಗಾರಿಕೆಯನ್ನು ನಾನು ಕಾಯಾ, ವಾಚಾ, ಮನಸಾ ನಿರ್ವಹಿಸಲು ವಚನ ಬದ್ಧನಾಗಿದ್ದೇನೆ.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com